# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.80/2023**

| | | | |
|---|---|---|---|
| ಹೆಸರು | : | ಬಸವರಾಜ ಮೇಟಿ | ಫ್ರಾಸಾ-6 |
| ತಂದೆಯ ಹೆಸರು | : | ಶ್ಯಾಮಣ್ಣ | ಚಾಸಾ-8 |
| ವರ್ಷ | : | 30 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಸಿಂಧಗಿ ತಾಃ ಬಾಗಲಕೋಟೆ | |

ದಿಃ 03.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

N V VIJAY Digitally signed by N V VIJAY Date: 2025.09.03 17:33:36 +0530

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1/ಬಸಪ್ಪ ನನ್ನ ದೊಡ್ಡಪ್ಪನ ಮಗ. ಚಾಸಾ-9/ಮಲ್ಲಪ್ಪ ನನ್ನ ದೊಡ್ಡಪ್ಪ. ಚಾಸಾ-10/ಯಂಕಪ್ಪ ಚಿಕ್ಕಪ್ಪ. ನ್ಯಾಯಾಲಯದ ಮುಂದಿರುವ ಆರೋಪಿ ಶಾವಕ್ಕ ನನ್ನ ಚಿಕ್ಕಮ್ಮ. ಮೃತ ಬಾಯವ್ವ ನನ್ನ ದೊಡ್ಡಮ್ಮ. ಚಾಸಾ-17/ಅನ್ನಪೂರ್ಣ ಹಾಗೂ ಚಾಸಾ-18/ನೀಲವ್ವ ನನ್ನ ಅತ್ತೆಯಂದಿರು. ಚಾಸಾ-19/ಶ್ರೀಕಾಂತ ನನ್ನ ಸಂಬಂಧಿಕ. ಮೃತ ಬಾಯವ್ವ ಮತ್ತು ಆರೋಪಿತಳು ಖಾಸ ಅಕ್ಕ-ತಂಗಿಯರು. ನಮ್ಮ ಮನೆಗೂ ಮತ್ತು ಚಾಸಾ-1 ರವರ ಮನೆಗೂ 600 ಮೀಟರ ಅಂತರ ಇರುತ್ತದೆ.

2. ಚಾಸಾ-10/ಯಂಕಪ್ಪ ಮತ್ತು ಆರೋಪಿತಳು ಗಂಡ ಹೆಂಡತಿಯರು. ಅವರಿಗೆ ಮಕ್ಕಳಿರುವುದಿಲ್ಲ. ಚಾಸಾ-1, ಚಾಸಾ-9, ಚಾಸಾ-10, ಆರೋಪಿತಳು ಹಾಗೂ ಮೃತ ಬಾಯಕ್ಕ ರವರು ಅವರ ಜಮೀನಿನಲ್ಲಿ ಮನೆಕಟ್ಟಿಕೊಂಡು ಜೊತೆಯಲ್ಲಿ ವಾಸವಾಗಿದ್ದರು, ಆದರೆ ಮೃತ ಬಾಯವ್ವಳಿಗೂ ಮತ್ತು ಆರೋಪಿತಳಿಗೂ ಆಗಾಗ ಗಲಾಟೆ ಆಗುತ್ತಿದ್ದರಿಂದ ಅವರು ಬೇರೆ ಬೇರೆ ಅಡುಗೆ ಮಾಡಿಕೊಳ್ಳುತ್ತಿದ್ದರು.

3. ಆರೋಪಿತಳ ಗಂಡನ ತಂಗಿಯ ಮಗಳು ಲಕ್ಷ್ಮೀ ಯನ್ನು ಚಾಸಾ-1 ರವರಿಗೆ ಕೊಟ್ಟು ಮದುವೆ ಮಾಡಬೇಕು ಎಂದು ಆರೋಪಿತಳು ಮುತುರ್ವಜಿ ವಹಿಸಿ ನಿಶ್ಚಯ ಮಾಡಿದ್ದರು, ಆದರೆ

ಮೃತ ಬಾಯವ್ವಳಿಗೆ ಲಕ್ಷ್ಮೀಯನ್ನು ಆಕೆಯ ಮಗ ಚಾಸಾ-1 ರವರಿಗೆ ಕೊಟ್ಟು ಮದುವೆ ಮಾಡಲು ಇಷ್ಟವಿರಲಿಲ್ಲ. ಈ ಕಾರಣದಿಂದ ಆರೋಪಿತಳಿಗೂ ಮತ್ತು ಬಾಯವ್ವಳಿಗೂ ಜಗಳವಾಗಿತ್ತು.

4. ದಿಃ 09.08.2023 ರಂದು ಮಧ್ಯಾಹ್ನ ಸುಮಾರು 12-30 ಗಂಟೆಗೆ ಚಾಸಾ-1 ರವರು ನನಗೆ ಕರೆ ಮಾಡಿ, ಆಕೆಯ ತಾಯಿ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾಳೆ ಕ್ರೂಸರ್ ವಾಹನ ತೆಗೆದುಕೊಂಡು ಬಾ ಆಕೆಯನ್ನು ಆಸ್ಪತ್ರೆಗೆ ದಾಖಲಿಸಬೇಕು ಎಂದು ಹೇಳಿದ್ದು, ನಮ್ಮ ವಾಹನದಲ್ಲಿ ಬಾಯವ್ವನ್ನು ಕರೆದುಕೊಂಡು ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಅದೇ ದಿನ ಮಧ್ಯಾಹ್ನ 2 ಗಂಟೆಗೆ ಬಾಯವ್ವ ಮೃತಪಟ್ಟಿರುತ್ತಾಳೆ. ಮೃತ ಬಾಯವ್ವಳಿಗೆ ತಲೆ ಮೇಲೆ, ಮುಖದ ಹತ್ತಿರ, ಕಣ್ಣಿನ ಹತ್ತಿರ ಮತ್ತು ಗದ್ದದ ಮೇಲೆ ಗಾಯಗಳಾಗಿದ್ದವು. ಸದರಿ ಗಾಯಗಳನ್ನು ನೋಡಿ ಇದು ಬಿದ್ದಿದ್ದರಿಂದ ಆದ ಗಾಯಗಳಾಗಿರುವುದಿಲ್ಲ ಎಂದು ಸಂಶಯ ಬಂದು, ನಾನು ಮತ್ತು ಚಾಸಾ-1 ರವರು ಪೊಲೀಸ ಠಾಣೆಗೆ ಭೇಟಿ ನೀಡಿ, ವಿಷಯ ತಿಳಿಸಿರುತ್ತೇವೆ.

5. ನಂತರ ದಿಃ 11.08.2023 ರಂದು ನಾನು ಚಾಸಾ-1 ರವರ ಮನೆಗೆ ಹೋಗಿದ್ದಾಗ ಮನೆಯಲ್ಲಿ ನನ್ನ ಚಿಕ್ಕಮ್ಮ/ಆರೋಪಿತಳೊಬ್ಬಳೆ ಮನೆಯಲ್ಲಿ ಇದ್ದಳು. ನಂತರ ನಾನು ಮನೆಯಲ್ಲಿ ಬೇರೆ ಯಾರೂ ಇರುವುದಿಲ್ಲವೆ ಎಂದು ವಿಚಾರಿಸಿದಾಗ ಆರೋಪಿತಳು ಎಲ್ಲರೂ ಹೊಲಕ್ಕೆ ಹೋಗಿರುತ್ತಾರೆ ಎಂದು ತಿಳಿಸಿದಳು. ನಂತರ ಆರೋಪಿತಳು ನನ್ನನ್ನು ನೋಡಿ ಅಳಲು ಪ್ರಾರಂಭಿಸಿದಳು. ಆಗ ನಾನು ಏಕೆ ಅಳುತ್ತಿದ್ದಿಯಾ ಎಂದು ವಿಚಾರಿಸಿದಾಗ, ಘಟನೆಯ ದಿನ ಆಕೆ ಮತ್ತು ಬಾಯವ್ವ ಇಬ್ಬರೆ ಮನೆಯಲ್ಲಿ ಇದ್ದು, ಬಾಯವ್ವ ಆಕೆಯ ಮಗ ಚಾಸಾ-1 ರವರ ಮದುವೆ ವಿಚಾರವಾಗಿ ಆಕೆ ಮಗ ಚಾಸಾ-1 ರವರ ತಲೆ ಕೆಡಿಸಿ, ಲಕ್ಷ್ಮೀ ರವರನ್ನು ಆತನಿಗೆ ಮದುವೆ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದು ಹಾರಾಡುತ್ತಾ ಆಕೆ ಬಟ್ಟೆ ಒಗೆಯಲು ಮನೆ ಮುಂದೆ ಹೋದಾಗ, ಆಕೆ ಮನೆ ಒಳಗೆ ಕಸಗೂಡಿಸಲು ಹೋಗಿ, ಕಸವನ್ನು ಹೊರಗೆ ಚೆಲ್ಲಲು ಬಂದು, ತೆಂಗಿನ ಕಾಯಿಗಳು ಬಿದ್ದಿದ್ದನ್ನು ನೋಡಿ ಅವುಗಳನ್ನು ಎತ್ತಿಕೊಳ್ಳುತ್ತಿದ್ದಾಗ, ಬಾಯವ್ವಳು ಆಕೆಗೆ ನಿನಗೆ ಮಕ್ಕಳಾಗಿಲ್ಲ, ತೆಂಗಿನ ಕಾಯಿ ಮಾರಿ ರೊಕ್ಕ ಇಟ್ಟುಕೊ ಎಂದು ಬೈದಾಡಿದಾಗ, ಆಕೆ ಅಲ್ಲೆ ಬಿದ್ದಿದ್ದ ಒಂದು ರಾಡ್ ತೆಗೆದುಕೊಂಡು ಬಾಯವ್ವಳ ತಲೆ ಮೇಲೆ ಹೊಡೆದಾಗ ಬಾಯವ್ವಳು ನನ್ನ ಸಾಯಿಸಿದಿಲೆ ಅಂತಾ ಕೂಗಾಡಿದ್ದು, ಆಕೆ ಮತ್ತೊಮ್ಮೆ ಇನ್ನೆರಡು ಬಾರಿ ರಾಡ್ ದಿಂದ ಬಾಯವ್ವಳ ಮುಖಕ್ಕೆ ಹಲ್ಲೆ ಮಾಡಿರುತ್ತಾಳೆ ಎಂದು ವಿಷಯ ತಿಳಿಸಿದಳು. ನಂತರ ಸದರಿ ವಿಚಾರವನ್ನು ಅದೇ ದಿನ ಮಧ್ಯಾಹ್ನ 3

ಗಂಟೆಗೆ ಚಾಸಾ-1 ರವರಿಗೆ ತಿಳಿಸಿರುತ್ತೇನೆ. ನಂತರ ಚಾಸಾ-1 ರವರು ಹಿರಿಯರ ಜೊತೆ ವಿಚಾರ ಮಾಡಿ ಆರೋಪಿತಳ ವಿರುದ್ಧ ದೂರು ದಾಖಲಿಸಿರುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಮತ್ತು ಮುಂದುವರೆದ ಪಡೆದುಕೊಂಡಿರುತ್ತಾರೆ.

6. ನಾನು ಘಟನೆ ದಿನ ಚಾಸಾ-1 ರವರ ಮನೆಗೆ ನಮ್ಮ ವಾಹನ ತೆಗೆದುಕೊಂಡು ಹೋದಾಗ ಚಾಸಾ-1 ರವರು ಅವರ ತಾಯಿಯನ್ನು ಎತ್ತಿ ಹಿಡಿದುಕೊಂಡಿದ್ದರು ಮತ್ತು ಆರೋಪಿತಳು ಚೊಂಬಿನಲ್ಲಿ ನೀರನ್ನು ತಂದು ಕೊಟ್ಟಾಗ ಚಾಸಾ-1 ರವರು ನೀರನ್ನು ಕುಡಿಸಿ, ನಂತರ ಚಾಸಾ-1 ರವರು ಹಾಸಿಗೆಯನ್ನು ತರುವಂತೆ ಆರೋಪಿತಳಿಗೆ ಹೇಳಿದಾಗ ಆರೋಪಿತಳು ಮನೆ ಒಳಗೆ ಹೋಗಿ ಹಾಸಿಗೆಯನ್ನು ತಂದು ಕೊಟ್ಟಾಗ, ನನ್ನ ಚಿಕ್ಕಮ್ಮ ಬಾಯವ್ವ ರವರನ್ನು ಹಾಸಿಗೆ ಮೇಲೆ ಮಲಗಿಸಿ ನಂತರ ನಮ್ಮ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

**ಪಾಟೀ ಸವಾಲುಃ** ಶ್ರೀ. ಪಿ ಹೆಚ್ ಎಂ ವಕೀಲರಿಂದ ಆರೋಪಿತಳ ಪರ

ಚಾಸಾ-1 ರವರ ತಾತ ಮತ್ತು ನಮ್ಮ ತಾತ ಅಣ್ಣ-ತಮ್ಮಂದಿರು. ಸುಮಾರು 20 ವರ್ಷಗಳ ಹಿಂದೆ ನಮ್ಮ ತಾತ ಮತ್ತು ಚಾಸಾ-1 ರವರ ತಾತ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಬೇರೆ ಬೇರೆ ಆಗಿರುತ್ತಾರೆ. ಚಾಸಾ-1 ಹಾಗೂ ಅವರ ಕುಟುಂಬದವರ ತೋಟದ ಆಸ್ತಿಗಳಲ್ಲಿ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿ. ನಮ್ಮ ತಾತನಿಗೆ ವಿಭಾಗದಲ್ಲಿ ಬಂದ ಆಸ್ತಿ ಚಾಸಾ-1 ರವರ ಮನೆಯಿಂದ ಸುಮಾರು 2 ಕಿ.ಮೀ ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿ 2 ಕಿ.ಮೀ ಅಂತರದಲ್ಲಿ ಸಹ ಜಮೀನು ಇರುತ್ತದೆ ಮತ್ತು ಚಾಸಾ-1 ರವರ ಮನೆಯಿಂದ 300 ಮೀಟರ ಮತ್ತು 500 ಮೀಟರ ಅಂತರದಲ್ಲಿ ಜಮೀನು ಇರುತ್ತವೆ ಎಂದು ನುಡಿಯುತ್ತಾರೆ. 2 ಕಿ.ಮೀ ಅಂತರದಲ್ಲಿ ಇರುವ ಜಮೀನಿನಲ್ಲಿ ನಮ್ಮ ಮನೆ ಕಟ್ಟಿಕೊಂಡು ವಾಸವಾಗಿರುತ್ತೇವೆ ಎಂದರೆ ಸರಿ.

2. ಮೃತ ಬಾಯವ್ವ ಮತ್ತು ಆರೋಪಿ/ಶಾವಕ್ಕ ಖಾಸ ಅಕ್ಕ-ತಂಗಿಯರು ಎಂದರೆ ಸರಿ. ಚಾಸಾ-1 ರವರ ಮನೆಯ ಪಕ್ಕದಲ್ಲಿ ಕಸ್ತೂರಿ ಮಲ್ಲಪ್ಪ ಮೇಟಿ ರವರಿಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ಸದರಿ ಕಸ್ತೂರಿ ಮೇಟಿ ರವರ ಗಂಡ ಬಾಗಲಕೋಟೆ ಜೈಲಿನಲ್ಲಿ ಜೈಲರ್ ಆಗಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ.

3. ನಾನು ದ್ವಿತೀಯ ಪಿ ಯು ಸಿ ರವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಚಾಸಾ-1 ರವರು ವಾಸ ಮಾಡುತ್ತಿರುವ ತೋಟದ ಮನೆಯಲ್ಲಿ ನಮಗೂ ಪಾಲು ಇರುತ್ತದೆ. ನಮ್ಮ ಮನೆಯವರು ಮತ್ತು ಚಾಸಾ-1 ರವರ ಮನೆಯವರ ವ್ಯವಹಾರ ಬೇರೆ ಬೇರೆ ಎಂದರೆ ಸರಿ. ಚಾಸಾ-1 ಮತ್ತು ನಾನು ಜೊತೆಯಲ್ಲಿ ಆಗಾಗ ಓಡಾಡುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರ ವೈಯಕ್ತಿಕ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿತಳ ಗಂಡ ಚಾಸಾ-10/ಯಂಕಪ್ಪನಿಗೂ ಮತ್ತು ನಮಗೂ ಯಾವುದೇ ವ್ಯವಹಾರ ಇರುವುದಿಲ್ಲ.

4. ಆರೋಪಿತಳಿಗೆ ಮಕ್ಕಳಿಲ್ಲದೆ ಇದ್ದ ಕಾರಣದಿಂದ ಚಾಸಾ-1 ರವರನ್ನು ಆಕೆಯ ಮಗ ಎಂದು ನೋಡಿಕೊಳ್ಳುತ್ತಿದ್ದಳು ಎಂದರೆ ಸರಿ. ಮೃತ ಬಾಯಕ್ಕ ಅಂಗವಿಕಲೆ ಆಗಿದ್ದಳು ಮತ್ತು ಆಕೆಗೆ ಸಕ್ಕರೆ ಕಾಯಿಲೆ ಇತ್ತು ಎಂದರೆ ಸರಿ. ಆಕೆಗೆ ಹಲವು ಬಾರಿ ಸಕ್ಕರೆ ಕಾಯಿಲೆ ಯಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದಳು ಎಂದರೆ ಸರಿಯಲ್ಲ.

5. ದಿಃ 09.08.2023 ರಂದು ಮಧ್ಯಾಹ್ನ ಸುಮಾರು 12-30 ಗಂಟೆಗೆ ಚಾಸಾ-1 ರವರು ಕರೆ ಮಾಡಿದಾಗ ಚಾಸಾ-1 ರವರ ಮನೆಯಿಂದ 500 ಮೀಟರ ಅಂತರದಲ್ಲಿದ್ದ ನಮ್ಮ ಜಮೀನಿನಲ್ಲಿ ಇದ್ದೆ. ಸದರಿ ದಿನ ನಮ್ಮ ಮತ್ತೊಂದು ಜಮೀನಿನ ಹತ್ತಿರ ನಮ್ಮ ಕ್ರೂಸರ್ ವಾಹನವನ್ನು ನಿಲ್ಲಿಸಿ ನಮ್ಮ ಜಮೀನಗೆ ಹೋಗಿದ್ದೆ. ನನಗೆ ಚಾಸಾ-1 ರವರು ಕರೆ ಮಾಡಿದ 5-10 ನಿಮಿಷದಲ್ಲಿ ಚಾಸಾ-1 ರವರ ಮನೆ ಹತ್ತಿರ ನಮ್ಮ ಕ್ರೂಸರ್ ವಾಹನದಲ್ಲಿ ಹೋಗಿರುತ್ತೇನೆ. ನಾನು ಚಾಸಾ-1 ರವರ ಮನೆಗೆ ಹೋದ ನಂತರ ಅವರ ಮನೆ ಹತ್ತಿರ ಸುಮಾರು 10 ರಿಂದ 15 ನಿಮಿಷ ಇದ್ದೆವು. ಬಾಗಲಕೋಟೆಯ ಕೆರೂಡಿ ಆಸ್ಪತ್ರೆ ನಮ್ಮ ಊರಿನಿಂದ ಸುಮಾರು 20 ಕಿ.ಮೀ ಅಂತರದಲ್ಲಿ ಇರುತ್ತದೆ. ಸುಮಾರು ಮಧ್ಯಾಹ್ನ 1-30 ಗಂಟೆಗೆ ಆಸ್ಪತ್ರೆಗೆ ತಲುಪಿರುತ್ತೇವೆ.

6. ಬಾಯಕ್ಕ ಆಸ್ಪತ್ರೆಯಲ್ಲಿ ಮೃತಪಟ್ಟ ನಂತರ ಸಂಜೆ ಸುಮಾರು 5 ಗಂಟೆಗೆ ಪೊಲೀಸ ಠಾಣೆಗೆ ನಾನು ಮತ್ತು ಚಾಸಾ-1 ಹೋಗಿದ್ದೆವು. ನಾವು ಪೊಲೀಸ ಠಾಣೆಗೆ ಹೋಗಿದ್ದಾಗ ನಮಗೆ ಆರೋಪಿತಳ ಮೇಲೆ ಯಾವುದೇ ಸಂಶಯ ಇರಲಿಲ್ಲ. ಸದರಿ ದಿನ ಪೊಲೀಸರು ನನ್ನ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಸದರಿ ದಿನ ನಾನು ಪೊಲೀಸ ಠಾಣೆಯಿಂದ ನೇರವಾಗಿ ನಮ್ಮ ಊರಿಗೆ ಹೋಗಿರುತ್ತೇನೆ. ಮರುದಿನ ಬಾಯವ್ವಳ ಅಂತ್ಯಕ್ರಿಯೆಯನ್ನು ಬೆಳಿಗ್ಗೆ ಸುಮಾರ 10-11

ಗಂಟೆಗೆ ಮಾಡಲಾಯಿತು. ಸದರಿ ದಿನ ನಾನು ಮತ್ತೊಮ್ಮೆ ಪೊಲೀಸ ಠಾಣೆಗೆ ಹೋಗಿರವುದಿಲ್ಲ. ದಿಃ 10.08.2023 ರಂದು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ದಿಃ 10.08.2023 ರಂದು ಪೊಲೀಸರ ಮುಂದೆ ಬಾಯವ್ವ ಕಲ್ಲಿನ ಮೇಲೆ ಬಿದ್ದು, ಅದರಂತೆ ಅವಳಿಗೆ ಭಾರಿ ಪೆಟ್ಟುಗಳಾಗಿರಬಹುದು ಎಂದು ಹೇಳಿಕೆ ನೀಡಿರುವುದಿಲ್ಲ. ದಿಃ 10.08.2023 ರಂದು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ''**ನನ್ನ ದೊಡ್ಡವ್ವಳಾದ ಬಾಯವ್ವ ಗಂಡ ಮಲ್ಲಪ್ಪ ಮೇಟಿ ವಯಾ-55 ವರ್ಷ, ಸಾಃ ಸಿಂದಗಿ ತೋಟ, ತಾಃಜಿ ಬಾಗಲಕೋಟೆ ಇವಳು ಬಟ್ಟೆ ತೊಳೆಯಲು ಹೋದಾಗ ಅವಳಿಗೆ ತಲೆ ಸುತ್ತಿ ಜೋಲಿ ಹೋಗಿ ಬಟ್ಟೆ ತೊಳೆಯುವ ಸ್ಥಳದಲ್ಲಿದ್ದ ಕಲ್ಲಿನ ಮೇಲೆ ಬಿದ್ದು ಅದರಿಂದ ಅವಳ ತಲೆಗೆ ಭಾರಿ ಗಾಯಪೆಟ್ಟುಗಳು ಆಗಿರಬಹುದು ಅಂತಾ ಮೇಲ್ನೊಟಕ್ಕೆ ತಿಳಿದು ಬಂದರೂ ಕೂಡಾ ಅವಳ ತಲೆಯ ಮೇಲೆ ಹಲವು ಕಡೆಗಳಲ್ಲಿ ಆದಂತಹ ಮಾರಣಾಂತಿಕ ಗಾಯಪೆಟ್ಟುಗಳನ್ನು ನೋಡಲಾಗಿ ಅವಳ ಮರಣದಲ್ಲಿ ನಮಗೆ ಸಂಶಯ ಕಂಡುಬರುತ್ತಿದ್ದು**'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಶಾನೆ ಡಿ-1 ಎಂದು ಗುರುತಿಸಲಾಯಿತು.

7. ಸಾಮಾನ್ಯವಾಗಿ ಊರುಗಳಲ್ಲಿ ಯಾರಾದರೂ ಮೃತಪಟ್ಟರೆ ಊರಿನವರು ನೋಡಲು ಬರುತ್ತಾರೆ ಮತ್ತು ಮನೆಯವರಿಗೆ 4-5 ದಿನಗಳ ವರೆಗೆ ಸಾಂತ್ವಾನ ಹೇಳುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಸಾವು ಆದ ಮನೆಯಲ್ಲಿ ಮನೆಯವರು ಸ್ವಲ್ಪ ದಿನಗಳ ಕಾಲ ಹೊರಗೆ ಓಡಾಡುವುದಿಲ್ಲ ಎಂದರೆ ಸರಿ. ಹಾಗೆಯೇ ಯಾವುದೇ ಕೆಲಸವಿದ್ದರೂ ಸಹ ಸಾಮಾನ್ಯವಾಗಿ ಮನೆಯವರು ಹೊರಗೆ ಹೋಗುವುದಿಲ್ಲ ಎಂದರೆ ಸರಿ.

8. ದಿಃ 11.08.2023 ರಂದು ಮಧ್ಯಾಹ್ನ ಸುಮಾರು 1 ಗಂಟೆಗೆ ಆರೋಪಿತಳು ನನಗೆ ಆಕೆ ಬಾಯವ್ವಳ ಮೇಲೆ ರಾಡ್ ನಿಂದ ಹಲ್ಲೆ ಮಾಡಿದ ವಿಚಾರ ತಿಳಿಸಿರುತ್ತಾಳೆ. ಮನೆಯಲ್ಲಿ ಯಾವುದಾದರೂ ಸಾವು ಆದರೆ 3 ದಿನಗಳ ನಂತರ ದಿನಕರ್ಮ ಮಾಡಲಾಗುತ್ತದೆ ಎಂದರೆ ಸರಿ. ದಿಃ 11.08.2023 ಬಾಯವ್ವ ಮೃತಪಟ್ಟ 3 ನೇ ದಿನ ಆಗಿತ್ತು ಎಂದರೆ ಸರಿ. ದಿಃ 11.08.2023 ರಂದು ನಾನು ಚಾಸಾ-1 ರವರಿಗೆ ಆರೋಪಿತಳು ಹೇಳಿದ ವಿಚಾರವನ್ನು ತಿಳಿಸಿದಾಗ ಸದರಿ ದಿನ ನಾನು ಮತ್ತು ಚಾಸಾ-1 ರವರು ಪೊಲೀಸ ಠಾಣೆಗೆ ಹೋಗಿ ದೂರು ನೀಡಲು ಪ್ರಯತ್ನಿಸಿರುವುದಿಲ್ಲ. ದಿಃ 12.08.2023 ರಂದು ನಾನು ಚಾಸಾ-1 ರವರ ಜೊತೆಯಲ್ಲಿ ದೂರು ನೀಡಲು ಪೊಲೀಸ ಠಾಣೆಗೆ

ಹೋಗಿರುವುದಿಲ್ಲ. ಆರೋಪಿತಳು ನನ್ನ ಮುಂದೆ ಹೇಳಿಕೊಂಡ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

9. ದಿಃ 09.08.2023 ರಂದು ಸಂಜೆ 6 ಗಂಟೆಯವರೆಗೂ ನಾವು ಪೊಲೀಸ ಠಾಣೆಯಲ್ಲಿ ಯಾವುದೇ ದೂರನ್ನು ಸಲ್ಲಿಸಿರಲಿಲ್ಲ. ಸದರಿ ದಿನ ಪೊಲೀಸರೆ ಬಾಗಲಕೋಟೆ ಸರ್ಕಾರಿ ಆಸ್ಪತ್ರೆಗೆ ಬಂದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಪೊಲೀಸರು ಬಾಗಲಕೋಟೆ ಸರ್ಕಾರಿ ಆಸ್ಪತ್ರೆಗೆ ಬಂದಾಗ ನಾನು, ಚಾಸಾ-1 ಮತ್ತು ಚಾಸಾ-11 ರವರ ಜೊತೆ ಆಸ್ಪತ್ರೆಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಸದರಿ ದಿನ ಬಾಯಕ್ಕ ಮೃತಪಟ್ಟು ಸುಮಾರು 2 ಗಂಟೆಗಳಾಗಿದ್ದರೂ ಏಕೆ ಸದರಿ ವಿಚಾರವನ್ನು ತಿಳಿಸಿರುವುದಿಲ್ಲ ಎಂದು ಪೊಲೀಸರು ನನ್ನನ್ನು, ಚಾಸಾ-1 ಮತ್ತು 11 ರವರನ್ನು ವಿಚಾರ ಮಾಡಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಚಾಸಾ-1 ರವರು ಪೊಲೀಸರಿಗೆ ಬಾಯಕ್ಕ ತಾನಾಗಿಯೆ ತಲೆಸುತ್ತು ಬಂದು ಕಲ್ಲಿನ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾರೆ ಎಂದು ಹೇಳಿಕೆ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಂತರ ಅದೇ ದಿನ ರಾತ್ರಿ 8 ಗಂಟೆಗೆ ಚಾಸಾ-1 ಪೊಲೀಸ ಠಾಣೆಗೆ ಭೇಟಿ ನೀಡಿ, ಬಾಯಕ್ಕನ ಸಾವಿನ ಬಗ್ಗೆ ಸಂಶಯ ಇರುತ್ತದೆ ಎಂದು ಮತ್ತೊಂದು ಹೇಳಿಕೆ ಬರೆದುಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಂತರ ನನ್ನನ್ನು, ಚಾಸಾ-1 ಮತ್ತು ಚಾಸಾ-11 ರವರನ್ನು ಪೊಲೀಸ ಠಾಣೆಗೆ ಕರೆಯಿಸಿ ವಿಚಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಬಾಯಕ್ಕ ರವರ ಶವವನ್ನು ನಮ್ಮ ವಶಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

10. ದಿಃ 10.08.2023 ರಂದು ಸಂಜೆ ಸುಮಾರು 5 ಗಂಟೆಗೆ ಪೊಲೀಸರು ಮತ್ತೊಮ್ಮೆ ನನ್ನನ್ನು ಚಾಸಾ-1 ಮತ್ತು 11 ರವರನ್ನು ಠಾಣೆಗೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರು ನಮಗೂ ಮತ್ತು ಅವರಿಗೂ ಪಾಲುವಾಟ್ನಿ ವಿಚಾರವಾಗಿ ತಕರಾರು ಇರುತ್ತದೆ ಎಂದು ಪೊಲೀಸರ ಮುಂದೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಬಾಯಕ್ಕವ್ವ ರವರು ಮೃತಪಟ್ಟ ವಿಚಾರವಾಗಿ ನನ್ನನ್ನು ಸಹ ಎರಡು ದಿನಗಳ ಕಾಲ ಠಾಣೆಯಲ್ಲಿ ಇಟ್ಟುಕೊಂಡು ವಿಚಾರಣೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಂತರ ನಮ್ಮ ಊರಿನ ಹಿರಿಯರು ಪೊಲೀಸ ಠಾಣೆಗೆ ಬಂದು ನಮ್ಮನ್ನು ಬಿಡಿಸಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಬಾಯಕ್ಕಳ ಸಾವಿನ ಬಗ್ಗೆ ನಮಗೆ ಸಂಶಯವಿದ್ದ ವಿಚಾರದ ಬಗ್ಗೆ ನಮ್ಮ ಮೇಲೆ ಬರಬಹುದು

ಎಂದು ತಿಳಿದುಕೊಂಡು, ಚಾಸಾ-1 ರವರ ಮನೆತನದ ಯಾರಾದರೂ ಒಬ್ಬರ ಮೇಲೆ ಆರೋಪ ಮಾಡೋಣ ಎಂದು ಅಂದುಕೊಂಡಿದ್ದೆವು ಎಂದರೆ ಸರಿಯಲ್ಲ.

11. ಆರೋಪಿ/ಶಾವಕ್ಕಳಿಗೆ ಮಕ್ಕಳಿಲ್ಲದೆ ಇದ್ದ ಕಾರಣದಿಂದ ಆಕೆಯ ಗಂಡನ ಪಾಲನ್ನು ಸಹ ಚಾಸಾ-1 ರವರು ಆತನ ಹೆಸರಿಗೆ ಮಾಡಿಕೊಳ್ಳಬೇಕು ಎಂದು ಅಂದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ನನ್ನ ತಂದೆ ಮತ್ತು ಚಾಸಾ-1 ರವರ ತಂದೆ ಮಾತನಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಆರೋಪಿತಳು ತಕರಾರು ವ್ಯಕ್ತ ಪಡಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಾನು ಸಹ ಆರೋಪಿತಳಿಗೆ ಆಕೆಯ ಗಂಡನ ಪಾಲನ್ನು ಚಾಸಾ-1 ರವರಿಗೆ ಬಿಟ್ಟು ಕೊಡುವಂತೆ ಒತ್ತಾಯ ಮಾಡಿದ್ದೆ ಎಂದರೆ ಸರಿಯಲ್ಲ. ಈ ಕಾರಣದಿಂದ ಆರೋಪಿ ಆಕೆಯ ವಿಚಾರಕ್ಕೆ ಬರಬೇಡ ಎಂದು ನನಗೆ ಹೇಳಿದ್ದಳು ಎಂದರೆ ಸರಿಯಲ್ಲ.

12. ನಾನು ಚಾಸಾ-1 ರವರ ಮನೆತನದ ವಿಚಾರವಾಗಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಬಾಯಕ್ಕ ಮೃತಪಟ್ಟ ಎರಡನೇ ದಿನ ನಮ್ಮ ಮನೆಯ 5-6 ಜನ ಸಾಂತ್ವಾನ ಹೇಳಲು ಚಾಸಾ-1 ರವರ ಮನೆಗೆ ಹೋಗಿದ್ದೆವು. ಆ ಸಮಯದಲ್ಲಿ ಚಾಸಾ-1 ಹಾಗೂ ಆರೋಪಿತಳು ಮತ್ತು ಅವರ ಕುಟುಂಬದವರು ಇದ್ದರು ಎಂದರೆ ಸರಿ.

13. ಆರೋಪಿತಳು ಜೈಲಿನಲ್ಲಿದ್ದಾಗ ಚಾಸಾ-10 ರವರ ಪಾಲನ್ನು ಚಾಸಾ-1 ರವರಿಗೆ ಮಾಡಿಕೊಳ್ಳಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

14. ದಿಃ 11.08.2023 ರಂದು ಮಧ್ಯಾಹ್ನ 1 ಗಂಟೆಗೆ ನಾನು ಚಾಸಾ-1 ರವರ ಮನೆಗೆ ಹೋಗಿರಲಿಲ್ಲ ಮತ್ತು ಆ ಸಮಯದಲ್ಲಿ ಆರೋಪಿತಳು ಮನೆಯಲ್ಲಿ ಒಬ್ಬಳೆ ಇದ್ದರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳು ನನ್ನ ಮುಂದೆ ಯಾವುದೇ ಬಾಯಕ್ಕಳ ಮೇಲೆ ಆಕೆ ರಾಡ್ ನಿಂದ ಹಲ್ಲೆ ಮಾಡಿದ ವಿಚಾರವನ್ನು ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ನಾನು ಮಧ್ಯಾಹ್ನ 3 ಗಂಟೆಗೆ ಚಾಸಾ-1 ರವರಿಗೆ ಆರೋಪಿತಳು ಹೇಳಿಕೊಂಡ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

15. ಚಾಸಾ-1 ರವರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ನಾವಿಬ್ಬರೂ ನ್ಯಾಯಾಲಯಕ್ಕೆ ಬಂದ ನಂತರ ಜೊತೆಯಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದೆವು ಎಂದರೆ ಸರಿ.

ಚಾಸಾ-1 ರವರು ನನಗೆ ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿತಳು ಆಸ್ತಿಯಲ್ಲಿ ತಕರಾರು ಮಾಡಬಹುದು ಈ ಕಾರಣದಿಂದ ಆತನು ಹೇಳಿಕೊಟ್ಟಂತೆ ಸಾಕ್ಷಿ ನುಡಿಯಬೇಕು ಎಂದು ಕೇಳಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

16. ಆರೋಪಿತಳಿಗೂ ಮತ್ತು ಬಾಯಕ್ಕಳ ಸಾವಿಗೆ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಸಹ ಆಕೆ ವಿರುದ್ಧ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.80/2023**

| | | | |
|---|---|---|---|
| ಹೆಸರು | : | ವಿಠ್ಠಲ ಕೋಳನ್ನವರ | ಫ್ರಾಸಾ-5 |
| ತಂದೆಯ ಹೆಸರು | : | ರಾಮಪ್ಪ | ಚಾಸಾ-7 |
| ವರ್ಷ | : | 45 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಸಿಂಧಗಿ ತಾಃ ಬಾಗಲಕೋಟೆ | |

ದಿಃ 03.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನ್ಯಾಯಾಲಯದ ಮುಂದಿರುವ ಆರೋಪಿ ಶಾವಕ್ಕ ನನಗೆ ಗೊತ್ತು.

ಬಾಯವ್ವ ಮೃತಪಟ್ಟ ವಿಚಾರವಾಗಿ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾಗ ನನ್ನನ್ನು ಕರೆಯಿಸಿ, ಒಂದು ದಾಖಲಾತಿ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿಯು ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತು ಅಥವಾ ಬಟ್ಟೆಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ-12 ಎಂದು ಗುರುತಿಸಲಾಗಿದೆ. ಯಾವ ಕಾರಣಕ್ಕಾಗಿ ನಿಪಿ-12 ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ಇದಾದ ಒಂದು ವಾರದ ನಂತರ ನನ್ನ ವೈಯಕ್ತಿಕ ಕೆಲಸದ ಮೇಲೆ ಪೊಲೀಸ ಠಾಣೆಗೆ ಹೋಗಿದ್ದಾಗ ಪೊಲೀಸರು ಮತ್ತೊಂದು ದಾಖಲಾತಿ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿ ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಶಾನೆ ಪಿ-13 ಎಂದು

ಗುರುತಿಸಲಾಯಿತು. ನಿಪಿ-13 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ದಿಃ 13.08.2023 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-6 ರವರನ್ನು ಠಾಣೆಗೆ ಬರಮಾಡಿಕೊಂಡು ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ತೋರಿಸಿ, ಈ ಪ್ರಕರಣದಲ್ಲಿ ಆರೋಪಿತಳು ಘಟನಾ ಸ್ಥಳವನ್ನು ಮತ್ತು ಕೊಲೆ ಮಾಡಲು ಉಪಯೋಗಿಸಿದ ಕಬ್ಬಿಣದ ರಾಡ್ ನ್ನು ಇಟ್ಟ ಸ್ಥಳವನ್ನು ತೋರಿಸಿರುವುದಾಗಿ ಹೇಳಿದ್ದು, ನಂತರ ನಮ್ಮನ್ನು ಆರೋಪಿತಳ ಜೊತೆ ಪೊಲೀಸರ ಇಲಾಖಾ ವಾಹನಲ್ಲಿ ಆರೋಪಿತಳ ಮನೆಯ ಬಳಿ ಕರೆದುಕೊಂಡು ಹೋಗಿದ್ದು, ಆರೋಪಿತಳು ಘಟನಾ ಸ್ಥಳವನ್ನು ತೋರಿಸಿ, ಅದೇ ಸ್ಥಳದಲ್ಲಿ ಆಕೆ ಬಾಯವ್ವಳನ್ನು ಕೊಲೆ ಮಾಡಿದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಬರವಣಿಗೆ ಮಾಡಿಕೊಂಡು, ಸದರಿ ಸ್ಥಳದಿಂದ 80 ಅಡಿ ಅಂತರದಲ್ಲಿದ್ದ ತೆಂಗಿನ ಮರಗಳ ಗುಡ್ಡೆ ಹತ್ತಿರ ಕರೆದುಕೊಂಡು ಹೋಗಿ, ಕಬ್ಬಿಣದ ಸಾಮಾನುಗಳನ್ನು ಒಗೆದಿದ್ದ ಸ್ಥಳದಿಂದ ಒಂದು ಕಬ್ಬಿಣದ ರಾಡ್ ನ್ನು ತೆಗೆದು ಹಾಜರುಪಡಿಸಿದ್ದು, ಇದೇ ಕಬ್ಬಿಣದ ರಾಡ್ ನಿಂದ ಆಕೆ ಬಾಯವ್ವಳನ್ನು ಹಲ್ಲೆ ಮಾಡಲು ಉಪಯೋಗಿಸಿದ ಕಬ್ಬಿಣದ ರಾಡ್ ಎಂದು ಹೇಳಿ ಹಾಜರುಪಡಿಸಿದ್ದು, ಅಲ್ಲಿ ಬರವಣಿಗೆ ಮಾಡಿಕೊಂಡು, ನಂತರ ಅಲ್ಲಿಂದ ಆರೋಪಿತಳು ತನ್ನ ಮನೆ ಒಳಗೆ ಹೋಗಿ ಆಕೆ ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ ಪಿ-11 ರಂತೆ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ನಿಪಿ-12 ರಂತೆ ಭಾವಚಿತ್ರಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ.

2. ದಿಃ 19.08.2023 ರಂದು ನನ್ನನ್ನು ಮತ್ತು ಚಾಸಾ-6 ರವರನ್ನು ಠಾಣೆಗೆ ಕರೆಯಿಸಿ ಯುಡಿ ಆರ್ 26/2023 ರಲ್ಲಿ ವಶಪಡಿಸಿಕೊಂಡ ಜಪ್ತಾದ ವಸ್ತುಗಳನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಂಡ

ಬಗ್ಗೆ ನಿಶಾನೆ ಪಿ-13 ರಂತೆ ಪಂಚನಾಮೆ ಜರುಗಿಸಲಾಯಿತು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-11 ಮತ್ತು 13 ರಂತೆ ಪಂಚನಾಮೆಗಳನ್ನು ಜರುಗಿಸಿದ್ದರೂ ಸಹ ಆರೋಪಿತಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.80/2023**

| | | | |
|---|---|---|---|
| ಹೆಸರು | : ವಿಠ್ಠಲ ಕದಾಂಪೂರ | | ಫ್ರಾಸಾ-4 |
| ತಂದೆಯ ಹೆಸರು | : ಯಲ್ಲಪ್ಪ | | ಚಾಸಾ-6 |
| ವರ್ಷ | : 41 ವರ್ಷ | | |
| ಉದ್ಯೋಗ | : ಒಕ್ಕಲುತನ | | |
| ವಿಳಾಸ | : ಸಿಂಧಗಿ | | |

ದಿಃ 03.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1/ಬಸಪ್ಪ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಶಾವಕ್ಕ ನನಗೆ ಗೊತ್ತು. ಚಾಸಾ-9/ಮಲ್ಲಪ್ಪ, ಚಾಸಾ-10/ಯಂಕಪ್ಪ, ಚಾಸಾ-14/ಅಶೋಕ, ಚಾಸಾ-15/ಪುಂಡಲೀಕ, ಚಾಸಾ-16/ಭೀಮಪ್ಪ ಕೊಂತಿಕಲ್ಲ ರವರು ನನಗೆ ಗೊತ್ತು. ಮೃತ ಬಾಯವ್ವ ನನಗೆ ಗೊತ್ತು, ಆಕೆ ಚಾಸಾ-1 ರವರ ತಾಯಿ.

2. ನಮ್ಮ ಜಮೀನು ಮತ್ತು ಚಾಸಾ-1 ರವರ ಜಮೀನುಗಳ ಮಧ್ಯ ಒಂದು ಜಮೀನು ಇರುತ್ತದೆ. ಆರೋಪಿ/ಶಾವಕ್ಕ ಮತ್ತು ಚಾಸಾ-10 ಯಂಕಪ್ಪ ರವರು ಗಂಡ-ಹೆಂಡತಿ. ಅವರಿಗೆ ಮಕ್ಕಳಿರುವುದಿಲ್ಲ. ಚಾಸಾ-1, ಚಾಸಾ-10, ಚಾಸಾ-9, ಆರೋಪಿತಳು ಹಾಗೂ ಮೃತ ಬಾಯವ್ವ ರವರೆಲ್ಲರೂ ಅವರ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದರು. ಮೃತ ಬಾಯವ್ವ ಹಾಗೂ ಆರೋಪಿ/ಶಾವಕ್ಕ ಖಾಸ ಅಕ್ಕ-ತಂಗಿಯರು ಮತ್ತು ಅವರಿಬ್ಬರು ಅನ್ಯೋನ್ಯವಾಗಿದ್ದರು. ಚಾಸಾ-1 ರವರಿಗೆ ಯಾರ ಮಗಳನ್ನು ಮದುವೆ ಮಾಡಿ ಕೊಡಬೇಕು ಎಂದು ನಿಶ್ಚಯ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಬಾಯವ್ವ ಹೇಗೆ ಮೃತಪಟ್ಟಿರುತ್ತಾಳೆ ಮತ್ತು ಆಕೆ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ.

3. ಬಾಯವ್ವ ಮೃತಪಟ್ಟ ವಿಚಾರವಾಗಿ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾಗ ನನ್ನನ್ನು ಕರೆಯಿಸಿ, ಒಂದು ದಾಖಲಾತಿ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿಯು ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಶಾನೆ ಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತು ಅಥವಾ ಬಟ್ಟೆಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-12 ಎಂದು ಗುರುತಿಸಲಾಯಿತು. ಯಾವ ಕಾರಣಕ್ಕಾಗಿ ನಿಪಿ-12 ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ಇದಾದ ಒಂದು ವಾರದ ನಂತರ ನನ್ನ ವೈಯಕ್ತಿಕ ಕೆಲಸದ ಮೇಲೆ ಪೊಲೀಸ ಠಾಣೆಗೆ ಹೋಗಿದ್ದಾಗ ಪೊಲೀಸರು ಮತ್ತೊಂದು ದಾಖಲಾತಿ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿ ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಶಾನೆ ಪಿ-13 ಎಂದು ಗುರುತಿಸಲಾಯಿತು. ನಿಪಿ-13 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ. ಪೊಲೀಸರು ಈ ಪ್ರಕರಣದ ವಿಚಾರವಾಗಿ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ಮಲ್ಲಪ್ಪನ ಹೆಂಡತಿ ಬಾಯವ್ವ ಹಾಗೂ ಆರೋಪಿ/ಶಾವಕ್ಕ ಇವರಿಬ್ಬರಲ್ಲಿ ಹೊಂದಾಣಿಕೆ ಇರಲಿಲ್ಲ, ಅವರಿಬ್ಬರೂ ಸಣ್ಣಪುಟ್ಟ ವಿಷಯಕ್ಕೆ ಆಗಾಗ ಜಗಳ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾಯವ್ವ ಮೃತಪಡುವ ಒಂದು ವರ್ಷದ ಹಿಂದೆ ಆರೋಪಿತಳು ತನ್ನ ಅಕ್ಕ ಬಾಯವ್ವಳ

ಜೊತೆ ಕೂಡಿ ಇರುವದು ಆಗುವುದಿಲ್ಲ ಎಂದು ನ್ಯಾಯ ತೆಗೆದಾಗ ನಾನು, ಚಾಸಾ-14, ಚಾಸಾ-15, ಚಾಸಾ-16 ರವರು ಸೇರಿ ನ್ಯಾಯ ಪಂಚಾಯತಿ ಮಾಡಿ ಆರೋಪಿತಳಿಗೆ ಬಾಯಕ್ಕಳ ಜೊತೆ ಹೊಂದಿಕೊಂಡು  ಹೋಗು ಎಂದು ಹೇಳಿದರೂ ಸಹ ಆಕೆ ಅವರ ಮನೆಯ ಇನ್ನೊಂದು ಕೋಣೆಯಲ್ಲಿ ತನ್ನ ಅಡುಗೆ ಪ್ರತ್ಯೇಕ ಮಾಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ.

2. ಚಾಸಾ-1 ರವರಿಗೆ ಚಾಸಾ-17/ಅನ್ನಪೂರ್ಣ ರವರ ಮಗಳು ಲಕ್ಷ್ಮೀ ರವರನ್ನು ಮದುವೆ ಮಾಡಲು ಮಾತುಕತೆ ಮಾಡಿದಾಗ ಚಾಸಾ-1 ರವರ ತಾಯಿ ಮೃತ ಬಾಯವ್ವ ಮನೆಗೆ ಲಕ್ಷ್ಮೀ ಹೊಂದಿಕೊಂಡು ಹೋಗುವದಿಲ್ಲ ಎಂದು ತಕರಾರು ಮಾಡಿದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಕಾರಣದಿಂದ ಮೃತ ಬಾಯವ್ವ ಆರೋಪಿತಳ ಮೇಲೆ ಸಿಟ್ಟಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ.

3. ದಿಃ 09.08.2023 ರಂದು ಮಧ್ಯಾಹ್ನ ಸುಮಾರು 1 ಗಂಟೆಗೆ ಮೃತ ಬಾಯವ್ವ ತನ್ನ ಮನೆ ಮುಂದೆ ಬಟ್ಟೆ ತೊಳೆಯುವ ಕಲ್ಲಿನ ಹತ್ತಿರ ಬಿದ್ದಿದ್ದು, ಅವಳ ತಲೆಗೆ ಭಾರಿ ಪೆಟ್ಟಾಗಿತ್ತು, ನಂತರ ಚಾಸಾ-8/ಬಸವರಾಜ ಮತ್ತು ಚಾಸಾ-11/ಗಣಪತಿ ಹಾಗೂ ಚಾಸಾ-9/ಮಲ್ಲಪ್ಪ ರವರು ಬಾಯವ್ವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ.

4. ನಂತರ ಘಟನೆ ದಿನ ಬೆಳಿಗ್ಗೆ 9 ಗಂಟೆ ಸುಮಾರಿಗೆ ಚಾಸಾ-1/ಬಸಪ್ಪ,  ಚಾಸಾ-9, ಚಾಸಾ-10 ರವರು ಜಮೀನಗೆ ಹೋದ ನಂತರ ಮೃತ ಬಾಯವ್ವ ಇವಳು ಆರೋಪಿತಳೊಂದಿಗೆ ಜಗಳ ತೆಗೆದು, ಏ ಗೊಡ್ಡ ಹಡಸು ನನ್ನ ಗಂಡನ ಮತ್ತು ಮಗನನ್ನು ಒಳಗೆ ಹಾಕೊಂಡಿದ್ದಿಯಾ, ಅವರೆಲ್ಲ ನಿನ್ನ ಮಾತು ಕೇಳುತ್ತಾರೆ, ನನ್ನ ಮಾತು ಕೇಳುವದಿಲ್ಲ ಮತ್ತು ಟಕ್ಕಳಕಿ ಹೆಣ್ಣನ್ನು ಬೇಡ ಎಂದರೂ ಬಸಪ್ಪನಿಗೆ ಲಗ್ನ ಮಾಡಲು ನಿಂತಿ ಅಂತಾ ಅವಾಚ್ಯವಾಗಿ ಆರೋಪಿತಳಿಗೆ ಬೈದಳು ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.  ನಂತರ ಆರೋಪಿತಳು ಮನೆ ಕಸ ಗೂಡಿಸಿ ಚೆಲ್ಲಲು ಹೊರಗೆ ಬಂದಾಗ, ಮೃತ ಬಾಯವ್ವ ಬಟ್ಟೆ ತೊಳೆಯುತ್ತಿದ್ದು, ಆ ಸಮಯದಲ್ಲಿ ಮನೆ ಮುಂದೆ ಬಿದ್ದಿದ್ದ ತೆಂಗಿನ ಕಾಯಿಗಳನ್ನು ಆರೋಪಿತಳು ಆರಿಸಿಕೊಳ್ಳುತ್ತಿದ್ದಾಗ ಮೃತ ಬಾಯವ್ವಳು ನಿನಗೆ ಮಕ್ಕಳಿಲ್ಲ-ಮರಿಯಿಲ್ಲ ಬಂಜೆ ಹಡಸು ಅವುಗಳನ್ನು ಆರಿಸಿಕೊಂಡು ಹಣ ತೆಗೆದುಕೊಂಡು ಇಟ್ಟುಕೊ ಎಂದು

ಬೈದಿದ್ದರಿಂದ ಆರೋಪಿತಳು ಸಿಟ್ಟಾಗಿ ಅವಳು ಇದ್ದರೆ ನನಗೆ ನೆಮ್ಮದಿ ಇಲ್ಲ ಎಂದು ಸುತ್ತಲೂ ಯಾರು ಇಲ್ಲದ್ದನ್ನು ನೋಡಿ ಕಬ್ಬಿಣದ ರಾಡ್ ದಿಂದ ಮಧ್ಯಾಹ್ನ 12 ಗಂಟೆಗೆ ಅವಳ ತಲೆಗೆ ಹೊಡೆದು ಕೊಲೆ ಮಾಡಿದ್ದು, ನಂತರ ರಾಡ್ ನ್ನು ಬೇರೆ ಕಡೆ ಇಟ್ಟು ಮನೆಯಲ್ಲಿ ಕುಳಿತಿದ್ದು, ನಂತರ ಸದರಿ ವಿಷಯವನ್ನು ಆರೋಪಿತಳು ಚಾಸಾ-8/ಬಸವರಾಜನ ಮುಂದೆ ಹೇಳಿದ ವಿಷಯ ನನಗೆ ಕೇಳಿ ಗೊತ್ತಾಯಿತು ಎಂದರೆ ಸರಿಯಲ್ಲ.

5. ದಿಃ 13.08.2023 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-7 ರವರನ್ನು ಠಾಣೆಗೆ ಬರಮಾಡಿಕೊಂಡು ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ತೋರಿಸಿ, ಈ ಪ್ರಕರಣದಲ್ಲಿ ಆರೋಪಿತಳು ಘಟನಾ ಸ್ಥಳವನ್ನು ಮತ್ತು ಕೊಲೆ ಮಾಡಲು ಉಪಯೋಗಿಸಿದ ಕಬ್ಬಿಣದ ರಾಡ್ ನ್ನು ಇಟ್ಟ ಸ್ಥಳವನ್ನು ತೋರಿಸಿರುವುದಾಗಿ ಹೇಳಿದ್ದು, ನಂತರ ನಮ್ಮನ್ನು ಆರೋಪಿತಳ ಜೊತೆ ಪೊಲೀಸರ ಇಲಾಖಾ ವಾಹನಲ್ಲಿ ಆರೋಪಿತಳ ಮನೆಯ ಬಳಿ ಕರೆದುಕೊಂಡು ಹೋಗಿದ್ದು, ಆರೋಪಿತಳು ಘಟನಾ ಸ್ಥಳವನ್ನು ತೋರಿಸಿ, ಅದೇ ಸ್ಥಳದಲ್ಲಿ ಆಕೆ ಬಾಯವ್ವಳನ್ನು ಕೊಲೆ ಮಾಡಿದ ಸ್ಥಳ ಎಂದು ತೋರಿಸಿದ್ದು, ಅಲ್ಲಿ ಬರವಣಿಗೆ ಮಾಡಿಕೊಂಡು, ಸದರಿ ಸ್ಥಳದಿಂದ 80 ಅಡಿ ಅಂತರದಲ್ಲಿದ್ದ ತೆಂಗಿನ ಮರಗಳ ಗುಡ್ಡೆ ಹತ್ತಿರ ಕರೆದುಕೊಂಡು ಹೋಗಿ, ಕಬ್ಬಿಣದ ಸಾಮಾನುಗಳನ್ನು ಒಗೆದಿದ್ದ ಸ್ಥಳದಿಂದ ಒಂದು ಕಬ್ಬಿಣದ ರಾಡ್ ನ್ನು ತೆಗೆದು ಹಾಜರುಪಡಿಸಿದ್ದು, ಇದೇ ಕಬ್ಬಿಣದ ರಾಡ್ ನಿಂದ ಆಕೆ ಬಾಯವ್ವಳನ್ನು ಹಲ್ಲೆ ಮಾಡಲು ಉಪಯೋಗಿಸಿದ ಕಬ್ಬಿಣದ ರಾಡ್ ಎಂದು ಹೇಳಿ ಹಾಜರುಪಡಿಸಿದ್ದು, ಅಲ್ಲಿ ಬರವಣಿಗೆ ಮಾಡಿಕೊಂಡು, ನಂತರ ಅಲ್ಲಿಂದ ಆರೋಪಿತಳು ತನ್ನ ಮನೆ ಒಳಗೆ ಹೋಗಿ ಆಕೆ ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ ಪಿ-11 ರಂತೆ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ನಿಪಿ-12 ರಂತೆ ಭಾವಚಿತ್ರಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ.

6. ದಿಃ 19.08.2023 ರಂದು ನನ್ನನ್ನು ಮತ್ತು ಚಾಸಾ-7 ರವರನ್ನು ಠಾಣೆಗೆ ಕರೆಯಿಸಿ ಯುಡಿ ಆರ್ 26/2023 ರಲ್ಲಿ ವಶಪಡಿಸಿಕೊಂಡ ಜಪ್ತಾದ ವಸ್ತುಗಳನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಂಡ ಬಗ್ಗೆ ನಿಶಾನೆ ಪಿ-13 ರಂತೆ ಪಂಚನಾಮೆ ಜರುಗಿಸಲಾಯಿತು ಎಂದರೆ ಸರಿಯಲ್ಲ.

7. ಈಗ ಮೇಲೆ ಓದಿ ಹೇಳಿದಂತೆ ಪೊಲೀಸರು ನನ್ನ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ಮಲ್ಲಪ್ಪನ ಹೆಂಡತಿ ಬಾಯವ್ವ............ ವರದಿ ಕೊಟ್ಟಿರುತ್ತಾರೆ ಎಂದು ಕೇಳಿ ಗೊತ್ತಾಗಿರುತ್ತದೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-14 ಎಂದು ಗುರುತಿಸಲಾಯಿತು. ನನ್ನ ಮುಂದುವರೆದ ಹೇಳಿಕೆಯಲ್ಲಿ ''ಬಸಪ್ಪ ತನ್ನ ತಾಯಿಯ ಮರಣದಲ್ಲಿ......... ಅಂತಾ ಕೇಳಿ ಗೊತ್ತಾಗಿರುತ್ತದೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-15 ಎಂದು ಗುರುತಿಸಲಾಯಿತು. ಪೊಲೀಸರ ಮುಂದೆ ನಿಪಿ-14 ಮತ್ತು 15 ರಂತೆ ಹೇಳಿಕೆಗಳನ್ನು ನೀಡಿದ್ದರೂ ಸಹ ಹಾಗೂ ನನ್ನ ಸಮಕ್ಷಮ ನಿಪಿ-11 ಮತ್ತು 13 ರಂತೆ ಪಂಚನಾಮೆಗಳನ್ನು ಜರುಗಿಸಿದ್ದರೂ ಸಹ ಆರೋಪಿತಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.80/2023**

| | | | |
|---|---|---|---|
| ಹೆಸರು | : | ಶಿವಪ್ಪ ಸಾಲಿ | ಫಿರ್ಯಾಸಾ-3 |
| ತಂದೆಯ ಹೆಸರು | : | ಬಳ್ಳಪ್ಪ | ಚಾಸಾ-5 |
| ವರ್ಷ | : | 55 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಸಿಂಧಗಿ | |

ದಿಃ 03.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1/ಬಸಪ್ಪ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಶಾವಕ್ಕ ನನಗೆ ಗೊತ್ತು. ಚಾಸಾ-9/ಮಲ್ಲಪ್ಪ, ಚಾಸಾ-10/ಯಂಕಪ್ಪ, ಚಾಸಾ-14/ಅಶೋಕ, ಚಾಸಾ-15/ಪುಂಡಲೀಕ, ಚಾಸಾ-16/ಭೀಮಪ್ಪ ಕೊಂತಿಕಲ್ಲ ರವರು ನನಗೆ ಗೊತ್ತು. ಮೃತ ಬಾಯವ್ವ ನನಗೆ ಗೊತ್ತು, ಆಕೆ ಚಾಸಾ-1 ರವರ ತಾಯಿ.

2. ನಮ್ಮ ಜಮೀನು ಮತ್ತು ಚಾಸಾ-1 ರವರ ಜಮೀನುಗಳ ಮಧ್ಯ ಒಂದು ಜಮೀನು ಇರುತ್ತದೆ. ಆರೋಪಿ/ಶಾವಕ್ಕ ಮತ್ತು ಚಾಸಾ-10 ಯಂಕಪ್ಪ ರವರು ಗಂಡ-ಹೆಂಡತಿ. ಅವರಿಗೆ ಮಕ್ಕಳಿರುವುದಿಲ್ಲ. ಚಾಸಾ-1, ಚಾಸಾ-10, ಚಾಸಾ-9, ಆರೋಪಿತಳು ಹಾಗೂ ಮೃತ ಬಾಯವ್ವ ರವರೆಲ್ಲರೂ ಅವರ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದರು. ಮೃತ ಬಾಯವ್ವ ಹಾಗೂ ಆರೋಪಿ/ಶಾವಕ್ಕ ಖಾಸ ಅಕ್ಕ-ತಂಗಿಯರು ಮತ್ತು ಅವರಿಬ್ಬರು ಅನ್ಯೋನ್ಯವಾಗಿದ್ದರು. ಆರೋಪಿತಳು ಹಾಗೂ ಬಾಯವ್ವಳ ನಡುವಿನ ತಂಟೆ ವಿಚಾರವಾಗಿ ನಾನು ಯಾವುದೇ ಬುದ್ಧಿವಾದ ಹೇಳಿರುವುದಿಲ್ಲ. ಚಾಸಾ-1 ರವರಿಗೆ ಯಾರ ಮಗಳನ್ನು ಮದುವೆ ಮಾಡಿ ಕೊಡಬೇಕು ಎಂದು ನಿಶ್ಚಯ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಬಾಯವ್ವ ಹೇಗೆ ಮೃತಪಟ್ಟಿರುತ್ತಾಳೆ ಮತ್ತು ಆಕೆ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ.

3. ಬಾಯವ್ವ ಮೃತಪಟ್ಟ ವಿಚಾರ ತಿಳಿದು ನಾನು ಆಕೆ ಶವವನ್ನು ನೋಡಲು ಆಸ್ಪತ್ರೆಗೆ ಹೋಗಿದ್ದಾಗ ಪೊಲೀಸರು ಮೂರು ದಾಖಲಾತಿಗಳ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಸದರಿ ದಾಖಲಾತಿಗಳು ಸ್ಥಳ ಪಂಚನಾಮೆ, ಬಟ್ಟೆ ಜಪ್ತಿ ಪಂಚನಾಮೆ ಹಾಗೂ ವಿಸ್ರಾ ಪಂಚನಾಮೆಗಳಾಗಿದ್ದು, ಸಾಕ್ಷಿ ಸಹಿಗಳನ್ನು ಗುರುತಿಸುವ ಸಲುವಾಗಿ ಸದರಿ ಪಂಚನಾಮೆಗಳನ್ನು ನಿಶಾನೆ ಪಿ-6 ರಿಂದ 8 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು. ನಿಪಿ-6 ರಿಂದ 8 ದಾಖಲಾತಿಗಳಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-3 ಎಂದು ಗುರುತಿಸಲಾಗಿದೆ. ಯಾವ ಕಾರಣಕ್ಕಾಗಿ ನಿಪಿ-3 ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಈ ಪ್ರಕರಣದ ವಿಚಾರವಾಗಿ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಮತ್ತು ಮರು ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ಮಲ್ಲಪ್ಪನ ಹೆಂಡತಿ ಬಾಯವ್ವ ಹಾಗೂ ಆರೋಪಿ/ಶಾವಕ್ಕ ಇವರಿಬ್ಬರಲ್ಲಿ ಹೊಂದಾಣಿಕೆ ಇರಲಿಲ್ಲ, ಅವರಿಬ್ಬರೂ ಸಣ್ಣಪುಟ್ಟ ವಿಷಯಕ್ಕೆ ಆಗಾಗ ಜಗಳ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾಯವ್ವ ಮೃತಪಡುವ ಒಂದು ವರ್ಷದ ಹಿಂದೆ ಆರೋಪಿತಳು ತನ್ನ ಅಕ್ಕ ಬಾಯವ್ವಳ ಜೊತೆ ಕೂಡಿ ಇರುವದು ಆಗುವುದಿಲ್ಲ ಎಂದು ನ್ಯಾಯ ತೆಗೆದಾಗ ನಾನು, ಚಾಸಾ-14, ಚಾಸಾ-15, ಚಾಸಾ-16 ರವರು ಸೇರಿ ನ್ಯಾಯ ಪಂಚಾಯತಿ ಮಾಡಿ ಆರೋಪಿತಳಿಗೆ ಬಾಯಕ್ಕಳ ಜೊತೆ ಹೊಂದಿಕೊಂಡು ಹೋಗು ಎಂದು ಹೇಳಿದರೂ ಸಹ ಆಕೆ ಅವರ ಮನೆಯ ಇನ್ನೊಂದು ಕೋಣೆಯಲ್ಲಿ ತನ್ನ ಅಡುಗೆ ಪ್ರತ್ಯೇಕ ಮಾಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ.

2. ಚಾಸಾ-1 ರವರಿಗೆ ಚಾಸಾ-17/ಅನ್ನಪೂರ್ಣ ರವರ ಮಗಳು ಲಕ್ಷ್ಮೀ ರವರನ್ನು ಮದುವೆ ಮಾಡಲು ಮಾತುಕತೆ ಮಾಡಿದಾಗ ಚಾಸಾ-1 ರವರ ತಾಯಿ ಮೃತ ಬಾಯವ್ವ ಮನೆಗೆ ಲಕ್ಷ್ಮೀ ಹೊಂದಿಕೊಂಡು ಹೋಗುವದಿಲ್ಲ ಎಂದು ತಕರಾರು ಮಾಡಿದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಕಾರಣದಿಂದ ಮೃತ ಬಾಯವ್ವ ಆರೋಪಿತಳ ಮೇಲೆ ಸಿಟ್ಟಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ.

3. ದಿಃ 09.08.2023 ರಂದು ಮಧ್ಯಾಹ್ನ ಸುಮಾರು 1 ಗಂಟೆಗೆ ಮೃತ ಬಾಯವ್ವ ತನ್ನ ಮನೆ ಮುಂದೆ ಬಟ್ಟೆ ತೊಳೆಯುವ ಕಲ್ಲಿನ ಹತ್ತಿರ ಬಿದ್ದಿದ್ದು, ಅವಳ ತಲೆಗೆ ಭಾರಿ ಪೆಟ್ಟಾಗಿತ್ತು, ನಂತರ ಚಾಸಾ-8/ಬಸವರಾಜ ಮತ್ತು ಚಾಸಾ-11/ಗಣಪತಿ ಹಾಗೂ ಚಾಸಾ-9/ಮಲ್ಲಪ್ಪ ರವರು ಬಾಯವ್ವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ.

4. ನಂತರ ಘಟನೆ ದಿನ ಬೆಳಿಗ್ಗೆ 9 ಗಂಟೆ ಸುಮಾರಿಗೆ ಚಾಸಾ-1/ಬಸಪ್ಪ, ಚಾಸಾ-9, ಚಾಸಾ-10 ರವರು ಜಮೀನಗೆ ಹೋದ ನಂತರ ಮೃತ ಬಾಯವ್ವ ಇವಳು ಆರೋಪಿತಳೊಂದಿಗೆ ಜಗಳ ತೆಗೆದು, ಏ ಗೊಡ್ಡ ಹಡಸು ನನ್ನ ಗಂಡನ ಮತ್ತು ಮಗನನ್ನು ಒಳಗೆ ಹಾಕೊಂಡಿದ್ದಿಯಾ, ಅವರೆಲ್ಲ ನಿನ್ನ ಮಾತು ಕೇಳುತ್ತಾರೆ, ನನ್ನ ಮಾತು ಕೇಳುವದಿಲ್ಲ ಮತ್ತು ಟಕ್ಕಳಕಿ ಹೆಣ್ಣನ್ನು ಬೇಡ ಎಂದರೂ ಬಸಪ್ಪನಿಗೆ ಲಗ್ನ ಮಾಡಲು ನಿಂತಿ ಅಂತಾ ಅವಾಚ್ಯವಾಗಿ ಆರೋಪಿತಳಿಗೆ ಬೈದಳು ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತಳು ಮನೆ ಕಸ ಗೂಡಿಸಿ ಚೆಲ್ಲಲು ಹೊರಗೆ ಬಂದಾಗ, ಮೃತ ಬಾಯವ್ವ ಬಟ್ಟೆ ತೊಳೆಯುತ್ತಿದ್ದು, ಆ ಸಮಯದಲ್ಲಿ ಮನೆ ಮುಂದೆ ಬಿದ್ದಿದ್ದ ತೆಂಗಿನ ಕಾಯಿಗಳನ್ನು ಆರೋಪಿತಳು ಆರಿಸಿಕೊಳ್ಳುತ್ತಿದ್ದಾಗ ಮೃತ ಬಾಯವ್ವಳು ನಿನಗೆ ಮಕ್ಕಳಿಲ್ಲ-ಮರಿಯಿಲ್ಲ ಬಂಜೆ ಹಡಸು ಅವುಗಳನ್ನು ಆರಿಸಿಕೊಂಡು ಹಣ ತೆಗೆದುಕೊಂಡು ಇಟ್ಟುಕೊ ಎಂದು ಬೈದಿದ್ದರಿಂದ ಆರೋಪಿತಳು ಸಿಟ್ಟಾಗಿ ಅವಳು ಇದ್ದರೆ ನನಗೆ ನೆಮ್ಮದಿ ಇಲ್ಲ ಎಂದು ಸುತ್ತಲೂ ಯಾರು ಇಲ್ಲದ್ದನ್ನು ನೋಡಿ ಕಬ್ಬಿಣದ ರಾಡ್ ದಿಂದ ಮಧ್ಯಾಹ್ನ 12 ಗಂಟೆಗೆ ಅವಳ ತಲೆಗೆ ಹೊಡೆದು ಕೊಲೆ ಮಾಡಿದ್ದು, ನಂತರ ರಾಡ್ ನ್ನು ಬೇರೆ ಕಡೆ ಇಟ್ಟು ಮನೆಯಲ್ಲಿ ಕುಳಿತಿದ್ದು, ನಂತರ ಸದರಿ ವಿಷಯವನ್ನು ಆರೋಪಿತಳು ಚಾಸಾ-8/ಬಸವರಾಜನ ಮುಂದೆ ಹೇಳಿದ ವಿಷಯ ನನಗೆ ಕೇಳಿ ಗೊತ್ತಾಯಿತು ಎಂದರೆ ಸರಿಯಲ್ಲ.

5. ದಿಃ 10.08.2023 ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಪೊಲೀಸರು ನನ್ನನ್ನು ಮತ್ತು ಚಾಸಾ-4 ರವರನ್ನು ಆರೋಪಿತಳ ಮನೆ ಮುಂದೆ ಕರೆಯಿಸಿ, ಅಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಮ್ಮ ಸಮಕ್ಷಮ ನಿಶಾನೆ ಪಿ-6 ರಂತೆ ಸ್ಥಳ ಪಂಚನಾಮೆ ಮಾಡಿ, ಸ್ಥಳದಿಂದ ರಕ್ತ ಹತ್ತಿದ ಎರಡು ಕಲ್ಲುಗಳು, ರಕ್ತ ಹತ್ತಿದ ಮಣ್ಣು, ಸಾದಾ ಮಣ್ಣು ಮತ್ತು ಬಟ್ಟೆ ತೊಳೆಯುವ ಕಲ್ಲಿನ ಮೇಲೆ ಬಿದ್ದಿದ್ದ ರಕ್ತವನ್ನು ಹಾಗೂ ಮಾದರಿ ಹತ್ತಿಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ನಿಪಿ-3 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

6. ನಂತರ ಅದೇ ದಿನ ನನ್ನನ್ನು ಮತ್ತು ಚಾಸಾ-5 ರವರನ್ನು ಠಾಣೆಗೆ ಕರೆಯಿಸಿ, ಠಾಣೆಯಲ್ಲಿ ಚಾಸಾ-21/ಮಹಿಳಾ ಪೊಲೀಸ ಪೇದೆ ರವರು ಹಾಜರುಪಡಿಸಿದ ಮೃತ ಬಾಯವ್ವಳ ಬಟ್ಟೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಮ್ಮ ಸಮಕ್ಷಮ ನಿಶಾನೆ ಪಿ-7 ರಂತೆ ಪಂಚನಾಮೆ ಜರುಗಿಸಿ, ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

7. ದಿಃ 12.08.2023 ರಂದು ಪೊಲೀಸರು ಮತ್ತೊಮ್ಮೆ ನನ್ನನ್ನು ಮತ್ತು ಚಾಸಾ-4 ರವರನ್ನು ಠಾಣೆಗೆ ಬರಮಾಡಿಕೊಂಡು ಪೊಲೀಸ ಪೇದೆ/ಚಾಸಾ-22 ರವರು ಮೃತಳ ಮರಣೋತ್ತರ ಪರೀಕ್ಷೆ ಕಾಲಕ್ಕೆ ಸಂಗ್ರಹಿಸಿದ ವಿಸ್ರಾಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ ಪಿ-8 ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ, ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

8. ಈಗ ಮೇಲೆ ಓದಿ ಹೇಳಿದಂತೆ ಪೊಲೀಸರು ನನ್ನ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ಮಲ್ಲಪ್ಪನ ಹೆಂಡತಿ ಬಾಯವ್ವ............ ವರದಿ ಕೊಟ್ಟಿರುತ್ತಾರೆ ಎಂದು ಕೇಳಿ ಗೊತ್ತಾಗಿರುತ್ತದೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-9 ಎಂದು ಗುರುತಿಸಲಾಯಿತು. ನನ್ನ ಮುಂದುವರೆದ ಹೇಳಿಕೆಯಲ್ಲಿ ''ಬಸಪ್ಪ ತನ್ನ ತಾಯಿಯ ಮರಣದಲ್ಲಿ......... ಅಂತಾ ಕೇಳಿ ಗೊತ್ತಾಗಿರುತ್ತದೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-10 ಎಂದು ಗುರುತಿಸಲಾಯಿತು. ಪೊಲೀಸರ ಮುಂದೆ ನಿಪಿ-9 ಮತ್ತು 10 ರಂತೆ ಹೇಳಿಕೆಗಳನ್ನು ನೀಡಿದ್ದರೂ ಸಹ ಹಾಗೂ ನನ್ನ ಸಮಕ್ಷಮ ನಿಪಿ-6

ರಿಂದ 8 ಪಂಚನಾಮೆಗಳನ್ನು ಜರುಗಿಸಿದ್ದರೂ ಸಹ ಆರೋಪಿತಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

N V VIJAY
Digitally signed by N V VIJAY
Date: 2025.09.03 17:33:52 +0530

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .